ಕರ್ನಾಟಕ ವಿಧಾನ ಪರಿಷತ್ತು

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 436

2] ಮಾನ್ಯ ಸದಸ್ಯರ ಹೆಸರು : ಶ್ರೀ ಪ್ರಕಾಶ್ ಕೆ.ರಾಥೋಡ್ (ನಾಮ ನಿರ್ದೇಶನ ಹೊಂದಿದವರು)

3] ಉತ್ತರಿಸುವ ದಿನಾಂಕ : 16.12.2021

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಪೊಲೀಸ್ ಇಲಾಖೆ ಸಿಬ್ಬಂದಿಗಳಿಗೆ ಸಮವಸ್ತ್ರ ಹಾಗೂ ಶೂಗಳನ್ನು ಸರ್ಕಾರಿ ಸ್ವಾಮ್ಯದ ಪ್ರಿಯದರ್ಶಿನಿ ಸಂಸ್ಥೆಯಿಂದ ಖರೀದಿ ಮಾಡುವ ಚಿಂತನೆ ಸರ್ಕಾರದಲ್ಲಿ ಇದೆಯೇ;	ಇಲ್ಲ ಪೊಲೀಸ್ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ (ಪಿಎಸ್‌ಐ ಹುದ್ದೆಯಿಂದ ಪಿಸಿ ಹುದ್ದೆಯವರೆಗೆ) ಸಮವಸ್ತ್ರ ಹಾಗೂ ಶೂಗಳನ್ನು ಇಲಾಖಾ ನಿರ್ದಿಷ್ಟತೆಗನುಗುಣವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆ.ಟಿ.ಪಿ.ಪಿ) ನಿಯಮಗಳು–2000 ರ ಪ್ರಕಾರ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಿ ವಿತರಿಸಲಾಗುತ್ತಿದೆ.
ಆ.	ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ ಸಮವಸ್ತ್ರ ಹಾಗೂ ಶೂಗಳನ್ನು ಖರೀದಿ ಮಾಡುವುದರಿಂದ ಅನುಪಯುಕ್ತ ಖರ್ಚು ಆಗುವುದೇ; ಈ ಯೋಜನೆಯಿಂದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ಅನುಕೂಲವಾಗುವುದನ್ನು ಪರಿಗಣಿಸಲಾಗುವುದೇ?(ವಿವರ ನೀಡುವುದು)	ಸಮವಸ್ತ್ರ ಹಾಗೂ ಶೂಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆ.ಟಿ.ಪಿ.ಪಿ) ನಿಯಮಗಳು–2000 ರ ಪ್ರಕಾರ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸುತ್ತಿರುವುದರಿಂದ ಅನುಪಯುಕ್ತ ಖರ್ಚಾಗುತ್ತಿಲ್ಲ. ಸರ್ಕಾರದ ಆದೇಶದ ಪ್ರಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ (ಕೆ.ಟಿ.ಪಿ.ಪಿ) ನಿಯಮಗಳು–2000 ರ ಪ್ರಕಾರ ಸಮವಸ್ತ್ರ ಹಾಗೂ ಶೂಗಳನ್ನು ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಖರೀದಿಸಬೇಕಾಗಿದ್ದು, ಹಾಗೊಂದು ವೇಳೆ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಂದ ಖರೀದಿಸಬೇಕಾದಲ್ಲಿ ಸರ್ಕಾರದಿಂದ ವಿನಾಯಿತಿ ನೀಡಬೇಕಾಗಿರುತ್ತದೆ. ಕೆ.ಟಿ.ಪಿ.ಪಿ ನಿಯಮಗಳ ಪ್ರಕಾರ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಇಲಾಖಾ ನಿರ್ದಿಷ್ಟತೆಯ ಪ್ರಕಾರ ಖರೀದಿಸುತ್ತಿರುವುದರಿಂದ ಸರ್ಕಾರಿ ಸ್ವಾಮ್ಯದ ಸಂಸ್ಥೆಯವರು ಸಮವಸ್ತ್ರ ಹಾಗೂ ಶೂಗಳನ್ನು ಇಲಾಖಾ ನಿರ್ದಿಷ್ಟತೆಯ ಪ್ರಕಾರ ಸರಬರಾಜು ಮಾಡಲು ಸಿದ್ದರಿದ್ದಲ್ಲಿ, ಇ-ಟೆಂಡರ್ ನಲ್ಲಿ ಭಾಗವಹಿಸಬೇಕಾಗಿರುತ್ತದೆ.

ಸಂಖ್ಯೆ: ಹೆಚ್‌ಡಿ 113 ಇಎಫ್‌ಎಸ್ 2021

[ಆರಗ ಜ್ಞಾನೇಂದ್ರ]
ಗೃಹ ಸಚಿವರು